ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-2 Issue 3, Nov-Dec 2020, 1-9**
**©*IIMRD*, Mysuru**

IIMRD JOURNALS

**www.iimrd.com**

# ತಮಿಳುನಾಡಿನ ಜಾನಪದ ಕಲೆಗಳು

**ಲೀಲಾವತಿ. ಜಿ.[1]**

**ಪೀಠಿಕೆ**

ಮರದ ನೆರಳಿನಲ್ಲಿ, ಬೆಟ್ಟ ಗುಡ್ಡದ ಗುಹೆಗಳಲ್ಲಿ ತನ್ನನ್ನು ತಾನೇ ತಿಳಿಯದ ಆದಿ ಮಾನವನು ಏನನ್ನೋ ತಿಂದು ಎಲ್ಲೋ ಮಲಗಿ ಜೀವಿಸುತ್ತಿದ್ದ. ಕಾಲ ಬದಲಾದಂತೆ ತಾನು, ತನ್ನವರು, ತನ್ನ ಕುಟುಂಬ, ತನ್ನ ಗ್ರಾಮ, ದೇವರು, ಜಾತ್ರೆ, ಆಚಾರ–ವಿಚಾರ ಎಂಬ ಅರಿವು ಮೂಡಿ ಸಮುದಾಯದ ಪ್ರಜ್ಞೆ ತಿಳಿದುಬಂದಿತು. ಹೀಗೆ ನಾಗರಿಕನಾಗಿ ಜೀವಿಸಲು ಆರಂಬಿಸಿದ ಮಾನವನು ಆಹಾರಕ್ಕಾಗಿ ಬೇಟೆಯ ಜೊತೆಯಲ್ಲಿ ಕೃಷಿ, ವ್ಯವಸಾಯವನ್ನು ಕಂಡುಕೊಂಡನು. ಕೆಲಸದ ಬೇಸರವನ್ನು ಕಳೆಯಲು ಕಲೆಯನ್ನು ಸಾಧನವಾಗಿ ಬಳಸಿಕೊಂಡನು. ಇದರಿಂದ ತಮ್ಮನ್ನು ತಮ್ಮವರನ್ನು ತಾವು ಪೂಜಿಸುವ ದೇವರನ್ನು ಸಂತೋಷ ಪಡಿಸಲು ಕಲೆಗಳನ್ನು ಉಪಯೋಗಿಸಿಕೊಂಡನು. ಹಾಗೆ ಜೀವನದ ಒಂದೊಂದು ಸಂದರ್ಭಗಳಿಲ್ಲಿ ಕಲೆಯು ಸ್ಥಾನ ಪಡೆಯಿತು. ನಾಗರಿಕತೆ ಬೆಳೆದಂತೆ ಕಲೆಯು ಹೊಸ ಸಾಧ್ಯತೆಯೊಂದಿಗೆ ಬೆಳೆಯಿತು. ಅಂದಿನಿಂದ ಇಂದಿನವರೆಗೂ ಕಲೆಯು ಜನರನ್ನು ಸೆಳೆಯುವ ಮಹಾ ಶಕ್ತಿಯಾಗಿಯೇ ಕಂಡುಬರುತ್ತದೆ. ಈ ಕಲೆಗಳಲ್ಲಿ ಸಾಂಪ್ರದಾಯಿಕ ಕಲೆಗಳು, ಜಾನಪದ ಕಲೆಗಳು ಎಂದು ಹಲವು ಬಗೆಯ ಕಲೆಗಳಿದ್ದರೂ ಜಾನಪದ ಕಲೆಯೇ ಎಲ್ಲಾ ಕಲೆಗಳಿಗೆ ಮೂಲ ಬೇರಾಗಿದೆ. ಪ್ರಸ್ತುತ ಲೇಖನದಲ್ಲಿ ತಮಿಳುನಾಡಿನ ಜಾನಪದ ಕಲೆಗಳನ್ನು ಕುರಿತು ವಿಮರ್ಶೆ ಮಾಡಲಾಗಿದೆ.

ಕಲೆಯು ನೋಡುವವರು ಮತ್ತು ಕೇಳುವವರ ಮನದಲ್ಲಿ ಸೌಂದರ್ಯದ ಭಾವನೆಯ ಮೂಡಿಸಿ ಚಿಂತೆಯನ್ನು ಬಿಡಿಸುವ ಸಂಪತ್ತಾಗಿ ಕಂಡುಬರುತ್ತದೆ. ಭಾರತವು ಗ್ರಾಮಗಳಲ್ಲಿಯೇ ಜೀವಿಸುತ್ತಿದೆ ಎಂಬ ಗಾಂಧೀಜಿಯವರ ಮಾತಿನಂತೆ, ಕಲೆಯೂ ಸಹ ಗ್ರಾಮಗಳಲ್ಲಿಯೇ ಜೀವಿಸುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಕಲೆಗಳಲ್ಲಿ ಪ್ರಾಚೀನ ಕಲೆ (ಕಖಋಒಋಖಿಋಗಿಇ ಂಖಖಿ), ಜಾನಪದ ಕಲೆ (ಈಐಔಪಿ ಂಖಖಿ), ಸಾಂಪ್ರದಾಯಿಕ ಕಲೆ (ಅಐಂಖಋಖಋಅಂಐ ಂಖಖಿ) ಎಂಬ ಮೂರು ಬಗೆಗಳನ್ನು ಕಾಣಬಹುದು. ಪ್ರಾಚೀನ ಕಲೆಯು ಪರಿಸರದೊಂದಿಗೆ ಮಾನವನ ಪರಿಚಯವಾದ ಕಾಲದಲ್ಲಿ ಬುಡಕಟ್ಟು ಜನರಿಂದ ಆರಂಭವಾಗಿರಬೇಕು. ಜಾನಪದ ಕಲೆಯು ಪ್ರಾಚೀನ ಕಲೆಗಿಂತ ಸ್ವಲ್ಪ ಮುಂದುವರಿದು ಗ್ರಾಮದಲ್ಲಿ ಕಂಡುಬರುತ್ತದೆ. ಸಾಂಪ್ರದಾಯಿಕ ಕಲೆಯು ಜಾನಪದ ಕಲೆಗಿಂತ ಮುಂದುವರೆದ ಕಲೆಯಾಗಿದೆ. ಕುಣಿತ, ಆಟ, ನಟನೆ, ಕ್ರೀಡೆ, ಹಾಡು ಮುಂತಾದ ಕಲೆಗಳನ್ನು ಸೂಚಿಸುವ ರೀತಿಯಲ್ಲಿ ಬಳಕೆಯಾಗುತ್ತಿವೆ. ತಮಿಳಿನಲ್ಲಿ ಕೂತ್ತು (ನಟನೆ) ಎಂಬ ಪದವನ್ನೇ ಕಲೆಗಳಿಗೆ ಪ್ರಾಚೀನ ಕಾಲದಿಂದಲೂ

---

*[1] ಸಂಶೋಧನಾ ವಿದ್ಯಾರ್ಥಿ, ಭಾಷಾಂತರ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.*

ಬಳಸಿಕೊಂಡು ಬರಲಾಗುತ್ತಿತ್ತು. ಕೂಡಕ್‌ಕೂತ್ತು ಎಂಬ ಹೆಸರಿನಲ್ಲಿ ಹಲವು ಬಗೆಯ ಕಲೆಗಳಿದ್ದನ್ನು ನಾವು ನೋಡಬಹುದು. ಜಾತ್ರೆ, ಉತ್ಸವ, ಇನ್ನಿತರೆ ಕಾರ್ಯಗಳಲ್ಲಿ ಜಾನಪದ ಕಲೆಗಳು ಪ್ರದರ್ಶನವಾಗುತ್ತಿದ್ದವು. ಜಾನಪದ ಕಲೆಯು ಪ್ರಾದೇಶಿಕ ಗುಣವನ್ನು ಹೊಂದಿದ್ದು, ಎಲ್ಲಾ ಜಾನಪದ ಕಲೆಗಳು ಎಲ್ಲಾ ಪ್ರದೇಶಗಳಲ್ಲೂ ಕಾಣಿಸುವುದಿಲ್ಲ. ಜಾನಪದ ಕಲೆಗಳು ಪ್ರದರ್ಶನವು ನಿರ್ಧಿಷ್ಟ ಸ್ಥಳ(ಕಣ)ದ ಅವಶ್ಯಕತೆ ಇರದೆ ದೇವಸ್ಥಾನ, ಊರಿನ ಸಂತೆ ಬಯಲು, ಬೀದಿಗಳಲ್ಲಿಯೂ ಪ್ರದರ್ಶನವಾಗುತ್ತಿತ್ತು. ಇಲ್ಲಿ ಕೆಲವು ತಮಿಳುನಾಡಿನ ಪ್ರಮುಖ ಜಾನಪದ ಕಲೆಗಳನ್ನು ವಿವರಿಸಲಾಗಿದೆ.

**ಗರಗಾಟ್ಟಂ**

ತಲೆಯಲ್ಲಿ ಗರಗಂ ಇಟ್ಟುಕೊಂಡು ಆಡುವ ಆಟವನ್ನು ಗರಗಾಟ್ಟಂ ಎಂದು ಕರೆಯುತ್ತಾರೆ. ಗರಗಾಟ್ಟಂನಲ್ಲಿ ಮುಖ್ಯ ವಸ್ತುವಾಗಿ ಬಳಕೆಯಾಗುವುದು ಗರಗಂ. ಗರಗಂ ಎಂಬ ಪದವು ತಮಿಳಿನ ಪ್ರಾಚೀನ ಗ್ರಂಥಗಳಾದ ತೋಲ್ಕಾಪ್ಪಿಯಂ ಮತ್ತು ಕಲಿತ್ತೊಗೈಯಲ್ಲಿ ಕಂಡುಬರುತ್ತದೆ. ಗರಗಂ ಎಂದರೆ ಕುಂಬ (ಚೊಂಬಿನಂತಿರುವ ಗಡಿಗೆ) ಎಂದರ್ಥ. ಜಾತ್ರೆ, ಉತ್ಸವಗಳಲ್ಲಿ ದೇವರಿಗೆ ವ್ರತ ಇರುವವರು ಎತ್ತುವ ಗರಗಕ್ಕೆ ಶಕ್ತಿಗರಗಂ ಎಂದು ವೃತ್ತಿ ರೀತಿಯಾಗಿ ಎತ್ತುವ ಗರಗಕ್ಕೆ ಆಟ್ಟ ಗರಗಂ ಎಂದು ಕರೆಯಲಾಗುತ್ತದೆ. ಮಣ್ಣಿನಲ್ಲಿ ಮಾಡಿರುವ ಕುಂಬವನ್ನು ತೋಂಡಿಗರಗಂ, ರಾಗಿಯಲ್ಲಿ ಮಾಡಿದ ಕುಂಬಕ್ಕೆ ಸೆಂಬು ಗರಗಂ ಎಂದು ಕರೆಯುತ್ತಾರೆ. ಗರಗಾಟ್ಟಕ್ಕೆ ಬಳಸುವ ಕುಂಬದಲ್ಲಿ ನೀರು, ಉಸುಗು, ಅಕ್ಕಿ ಯಾವುದಾದರೊಂದು ಹಾಕಿ ತುಂಬಿಸಿ ಸುಂದರವಾಗಿ ಅಲಂಕರಿಸಲಾಗುತ್ತದೆ. ಅಲಂಕರಿಸಿದ ಕುಂಬದ ಕೊನೆಯಲ್ಲಿ ಗಿಳಿಯ ಗೊಂಬೆಯನ್ನು ಇಡಲಾಗುತ್ತದೆ. ಗರಗಾಟ್ಟಂ ಆಡುವ ಕಲಾವಿದರು ಅಲಂಕರಿಸಿಕೊಂಡು ಗರಗವನ್ನು ತಲೆಯಲ್ಲಿ ಇಟ್ಟುಕೊಂಡು ಗರಗ ಕೆಳಗೆ ಬೀಳದಂತೆ ಸಂಗೀತದ ತಾಳಕ್ಕೆ ತಕ್ಕಂತೆ ನಿಧಾನವಾಗಿ, ಅತೀವೇಗವಾಗಿ, ಸುತ್ತುತ್ತಾ, ಎದ್ದು ಕುಳಿತು, ಮಂಡಿಯೂರಿ, ಕುಣಿದು ಆಡುತ್ತಾರೆ. ಇದಲ್ಲದೆ ನೋಡುಗರನ್ನು ರಂಜಿಸಲು ಬಟ್ಟೆಯಿಂದ ಕಣ್ಣನ್ನು ಮುಚ್ಚಿಕೊಂಡು ತೆಂಗಿನಕಾಯಿ ಒಡೆಯುವುದು, ಕಣ್ಣಿನಲ್ಲಿ ಸೂಜಿ ತೆಗೆಯುವುದು, ಬೆಂಕಿಯನ್ನು ಸುತ್ತುವುದು, ಏಣಿಯಲ್ಲಿ ಏರುವುದು ಮುಂತಾದ ವಿದ್ಯೆ ಪ್ರದರ್ಶಿಸುತ್ತಾರೆ. ಗರಗಾಟ್ಟಂನ್ನು ಹೆಂಗಸರು, ಗಂಡಸರು ಸೇರಿ ಆಡಿದರೂ ಹೆಚ್ಚು ಸ್ತ್ರೀಯರು ಆಡುತ್ತಾರೆ. ಜಾನಪದ ಕಲೆಗಳಲ್ಲಿ ಇದು ಹೆಚ್ಚು ಪ್ರಸಿದ್ಧ ಪಡೆದ ಕಲೆಯಾಗಿದೆ.

**ಒಯಿಲಾಟ್ಟಂ**

ಒಯಿಲ್ ಎಂಬ ಪದಕ್ಕೆ ಸೌಂದರ್ಯ, ಗಾಂಭೀರ್ಯ, ಅಲಂಕಾರ ಉನ್ನತ ಎಂಬ ಅರ್ಥಗಳನ್ನು ನೀಡುತ್ತದೆ. ಈ ಕಲೆಯಲ್ಲಿ ಗಂಡಸರೇ ಹೆಚ್ಚು ಭಾಗಿಯಾಗುವುದರಿಂದ ಸೌಂದರ್ಯದ ಜೊತೆ ಗಾಂಭೀರ್ಯತೆಯೂ ಕೂಡಿದೆ. ಇದೊಂದು ಉತ್ತಮವಾದ ದೇಹದಂಡನೆ(ಯೋಗಾಸನ)ಯ ಕಲೆಯಾಗಿದೆ. ಒಂದೇ ಬಣ್ಣದ ಬಟ್ಟೆಯನ್ನು ತಲೆಯಲ್ಲಿ ಸುತ್ತಿಕೊಂಡು, ಕೈಯಲ್ಲಿ ಒಂದೇ ಬಗೆಯ ಬಣ್ಣದ ಕರವಸ್ತ್ರ ತೆಗೆದುಕೊಂಡು ತಾಳಕ್ಕೆ ತಕ್ಕಂತೆ ಕೈಯಲ್ಲಿರುವ ಬಟ್ಟೆವನ್ನು ಎಸೆದು ಆಡುವ ಆಟವಾಗಿದೆ. ಇಲ್ಲಿ ಆಡುವ ಆಟಗಾರರಿಗೆ ವಯಸ್ಸಿನ ವ್ಯತ್ಯಾಸ ಇರುವುದಿಲ್ಲ. ಎಲ್ಲರೂ ಒಂದೇ ಬಗೆಯಲ್ಲಿ ತಲೆಯನ್ನು ಬಾಚಿರುವುದು ಮತ್ತು ಕಾಲಿನಲ್ಲಿ ಗೆಜ್ಜೆ ಕಟ್ಟಿರುವುದು ಅವಶ್ಯಕವಾಗಿದೆ. ಆಟಗಾರರು ಐದೈದು ಜನರಂತೆ ಎರಡು ಸಾಲಿನಲ್ಲಿ

ಒಟ್ಟು ಹತ್ತುಜನ ಅಥವಾ ಹನ್ನೆರಡರಿಂದ ಇಪ್ಪತ್ತು ಜನರು ಸಾಲಾಗಿ ನಿಂತು ಈ ಕಲೆಯನ್ನು ಪ್ರದರ್ಶಿಸುತ್ತಾರೆ. ನೇರವಾದ ಸಾಲಿನಲ್ಲಿ ಆಡುವಾಗ ಒಬ್ಬರು (ನಾಯಕ) ಮಾತ್ರ ಮುಂದೆ ನಿಂತು ಆಡುತ್ತಾರೆ. ಎರಡು ಸಾಲಿನಲ್ಲಿ ಎರಡೂ ಗುಂಪಿನವರು ಬಿಡಿ ಬಿಡಿಯಾಗಿ ನಿಂತು ಒಬ್ಬರನ್ನು ಮತ್ತೊಬ್ಬರು ಮುಟ್ಟದಂತೆ ಆಡುತ್ತಾರೆ. ಮೊದಲು ದೇವರಿಗೆ ನಮಸ್ಕಾರ ಮಾಡುತ್ತಾರೆ. ಸಬಾ ನಮಸ್ಕಾರ ಮಾಡುವಾಗ ನೆಲವನ್ನು ಮುಟ್ಟಿ ನಮಸ್ಕರಿಸಿ ನಂತರ ಆಟ ಆರಂಭಿಸುತ್ತಾರೆ. ಆಟದ ನಡುವು ವಿರಾಮವು ಇರುತ್ತದೆ. ಕೊನೆಯ ಹಾಡಿಗಿಂತ ಹಿಂದಿನ ಹಾಡಿನಲ್ಲಿ ಗುರು ನಮನ ಸಲ್ಲಿಸಲಾಗುತ್ತದೆ. ಕೊನೆಯ ಹಾಡಿನಲ್ಲಿ ನೆಲವನ್ನು ಮುಟ್ಟಿ ನಮಸ್ಕರಿಸಿ ಆಟವನ್ನು ಮುಕ್ತಾಯಗೊಳಿಸುತ್ತಾರೆ. ಈ ಕಲೆಯಲ್ಲಿ ಹಾಡು, ಆಟ ಮತ್ತು ಸಂಬಾಷಣೆ ಎಂಬ ಮೂರು ಬಗೆಯಿದ್ದು, ಪ್ರಸ್ತುತ ದಿನಗಳಲ್ಲಿ ಸಂಭಾಷಣೆ ಕಂಡುಬರುವುದಿಲ್ಲ. ಮಹಾಭಾರತ, ಕಾತ್ತವರಾಯನ್ ಕತೆ, ಕೋವಲನ್ ಕತೆ, ಮದುರೈವೀರನ್ ಕತೆ, ವಳ್ಳಿ ಮದುವೆಯ ಕತೆ, ಮುಂತಾದ ಕತೆಗಳನ್ನು ಐತಿಹಾಸಿಕ ಸಂಗತಿಗಳನ್ನು ಹಾಡಿ ಜನರನ್ನು ರಂಜಿಸುತ್ತಾರೆ. ಕ್ಯಾಥೋಲಿಕ್ ಕ್ರೈಸ್ತರ ಜಾತ್ರೆಗಳಲ್ಲೂ ಬೈಬಲ್ ಕತೆಗಳನ್ನು ಕ್ರೈಸ್ತ ಮತ ಪ್ರಾಮುಖ್ಯತೆಗಳನ್ನು ಹಾಡಲಾಗುತ್ತದೆ. ಸಾಮಾನ್ಯವಾಗಿ ರಾತ್ರಿ ವೇಳೆಯಲ್ಲಿ ಈ ಕಲೆಯನ್ನು ಪ್ರದರ್ಶಿಸಲಾಗುತ್ತದೆ. ಜಾತ್ರಾ ಮಹೋತ್ಸವಗಳಲ್ಲಿ ಆಡುವ ಆಟಗಳಲ್ಲಿ ಒಯಿಲಾಟ್ಟಂ ಸಹ ಒಂದು ಪ್ರಮುಖ ಕಲೆಯಾಗಿದೆ.

**ತಪ್ಪಾಟ್ಟಂ ಅಥವಾ ಪರೈಯಾಟ್ಟಂ (ಹಲಗೆ ಬಾರಿಸುವುದು)**

ಆದಿ ಕಾಲದಿಂದಲೂ ಪ್ರಚಲಿತದಲ್ಲಿರುವ ಕಲೆಗಳಲ್ಲಿ ಪರೈಯಾಟ್ಟಂ ಸಹ ಒಂದಾಗಿದೆ. ತಪ್ಪು ಅಥವಾ ಪರೈ ಎಂದರೆ ಚರ್ಮದಿಂದ ಮಾಡಿದ ಹಲಗೆ ಇದನ್ನು ಬಾರಿಸಿ ಆಡುವ ಆಟವೇ ಪರೈಯಾಟ್ಟಂ. ಬೇಟೆ ಆಡುತ್ತಿದ್ದ ಜನಾಂಗದವರು ಒಂದಾಗಿ ಸೇರಲು ಮತ್ತು ಮೃಗಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಶಬ್ಧ ಸಂಕೇತ ಮಾಡುವುದರ ಮೂಲಕ ಈ ಆಟ ಆರಂಭವಾಗಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಪ್ರಾಣಿಗಳನ್ನು ಬೇಟೆಯಾಡಿ ತಿಂದ ನಂತರ ಉಳಿದ ಚರ್ಮವನ್ನು ಕಾಯಿಸಿ ಮನಸ್ಸಿಗೆ ಇಷ್ಟ ಬಂದಂತೆ ಹೊಡೆದು ಆಡಿದ ಆಟದ ಕಾಲಾಂತರದಲ್ಲಿ ಒಂದು ಕಲೆಯಾಗಿ ಜೀವನದ ಭಾವನೆಗಳನ್ನು ತಿಳಿಸುವ ಶಬ್ಧವಾಗಿ ಉದ್ವೇಗ, ಉಲ್ಲಾಸ, ಉತ್ಸಾಹದಿಂದ ಕೂಡಿರುತ್ತದೆ. ಸಾಮಾಜಿಕ ಜಾತಿ ವ್ಯವಸ್ಥೆಯಲ್ಲಿ ಮೇಲ್ಜಾತಿಯವರು ಲಗು ಪ್ರಕಾರದ ವಾದ್ಯಗಳನ್ನು ಬಳಸಿಕೊಂಡು ಕಠಿಣವಾದ ವಾದ್ಯಗಳನ್ನು ಕೀಳು ಜಾತಿಯವರಿಗೆ ನೀಡಲಾಯಿತು. ಪರೈ ಬಾರಿಸುವುದರಿಂದಲೇ ಪರೈಯರ್ (ಕೀಳು ಕುಳ) ಎಂದು ಕರೆದು ಹಲಗೆ ಬಾರಿಸುವುದು ಕೇವಲವಾಗಿ ಪರಿಗಣಿಸಿ ಅದು ಸಾವಿನ ವಿಷಯ ಮುಟ್ಟಿಸಲು, ಇನ್ನಿತರೆ ಕೆಲಸಕ್ಕೆ ಮಾತ್ರ ಬಳಸಿ ಪರೈಯರ್‌ನ್ನು ಅಸ್ಪೃಶ್ಯರನ್ನಾಗಿ ಕಾಣಲಾಯಿತು. ಕಾಲ ಬದಲಾದಂತೆ ಪರೈಯರ್(ದಲಿತ) ಯುವಕರು ಯಾವ ಪರೈಯನ್ನು ಬಾರಿಸುವುದು ಕೀಳಾಗಿ ಕಾಣಲಾಗಿತ್ತೋ ಆ ಪರೈಯನ್ನೇ ಬಿಡುಗಡೆಯ ಅಸ್ತ್ರವನ್ನಾಗಿ ಮಾಡಿಕೊಂಡರು. ನೇರವಾದ ಸಾಲಿನಲ್ಲಿ ಎದುರು ಬದರಾಗಿ ವೃತ್ತಾಕಾರವಾಗಿ ನಿಂತು ಆಡುತ್ತಾರೆ. ತಮಿಳುನಾಡಿನ ತಾಂಜಾವೂರ್, ಮದುರೈ, ದಿಂಟುಕ್ಕಲ್ ಜಿಲ್ಲೆಗಳಲ್ಲಿ ಪರೈಯಾಟ್ಟಂ ಕಲೆಗಾರರು ಹೆಚ್ಚಾಗಿ ಕಂಡುಬರುತ್ತಾರೆ. ನಿಂತು, ಕುಳಿತು, ಬಗ್ಗಿ, ಎಗರುತ್ತಾ, ಪಲ್ಟಿ ಹೊಡೆದು ಆಡುತ್ತಾರೆ. ಜಾತ್ರಾ ಮಹೋತ್ಸವಗಳಲ್ಲಿ, ಮದುವೆಯಲ್ಲಿ, ರಾಜಕೀಯ ಪ್ರಚಾರಗಳಲ್ಲಿ, ಮುಂತಾದ ಸಾಂಸ್ಕೃತಿಕ ಉತ್ಸವಗಳಲ್ಲಿ ಪರೈಯಾಟ್ಟಂ ಒಂದು ಪ್ರಮುಖ ಕಲೆಯಾಗಿ ಕಂಡುಬರುತ್ತದೆ.

**ಸಿಲಂಬಾಟ್ಟಂ**

ಸಿಲಂಬು ಎಂದರೆ ಕೋಲು, ತಡಿ ಎಂದರ್ಥ. ಇದೊಂದು ತಮಿಳರ ವೀರತ್ವದ ಆಟವಾಗಿದೆ. ಸಿಲಂಬು ಆಟವನ್ನು ಕೋಲು ಸುತ್ತುವುದು ಎಂತಲೂ ಕರೆಯುತ್ತಾರೆ. ಆರಂಭದಲ್ಲಿ ಬೆಟ್ಟ, ಗುಡ್ಡ, ಅರಣ್ಯ ಪ್ರದೇಶಗಳಲ್ಲಿ ಪ್ರಾಣಿಗಳನ್ನು ಬೇಟೆಯಾಡುವುದರ ಸಲುವಾಗಿ ಮತ್ತು ಅವುಗಳನ್ನು ಓಡಿಸಲು ಗಟ್ಟಿಯಾದ ಬಿದುರಿನ ಕೋಲನ್ನು ಬಳಸಲಾಗುತ್ತಿತ್ತು, ಕಾಲಾಂತರದಲ್ಲಿ ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ಬಿದುರಿನ ಕೋಲನ್ನು ತಿರುಗಿಸುವುದನ್ನು ಕಲಿತು ಅದನ್ನೇ ಅಸ್ತ್ರವನ್ನಾಗಿ ಮಾಡಿಕೊಂಡರು. ಹೀಗೆ ಅಸ್ತ್ರವಾಗಿ ಬಳಕೆಯಾಗಿದ್ದ ಸಿಲಂಬಂ ಮುಂದೆ ಕಲೆಯಾಗಿ ಬದಲಾಯಿತು. ಸಿಲಂಬಂ ಆಡುವವರು ಒಬ್ಬಬ್ಬರು 3 ಮೀಟರ್ ಉದ್ದವಾದ ಗಟ್ಟಿಯಾದ ಬಿದುರಿನ ಕಟ್ಟಿಗೆಯನ್ನು ಬಲವಾಗಿ ಬೀಸುತ್ತಾರೆ. ತನ್ನನ್ನು ರಕ್ಷಿಸಿಕೊಳ್ಳುವವನು ಮತ್ತೊಂದು ಬಿದುರಿನಿಂದ ಏಟು ಬೀಳದಂತೆ ಕಾಪಾಡಿಕೊಳ್ಳಬೇಕು. ಅದರೊಂದಿಗೆ ಮಿಂಚಿನ ವೇಗದಲ್ಲಿ ಸ್ಪರ್ಧಿಗೆ ಮರು ದಾಳಿ ಮಾಡಬೇಕು. ಗ್ರಾಮಗಳಲ್ಲಿ ಸಿಲಂಬಾಟ್ಟಂ ಶಿಕ್ಷಕರನ್ನು ಕಾಣಬಹುದು. ನಿಯಮವಾಗಿ ಕಲಿಯಲು ಕಡಿಮೆ ಎಂದರೂ ಆರು ತಿಂಗಳು ಬೇಕಾಗುತ್ತದೆ. ಕೋಲು ಬೀಸುವ ವೇಗ, ಕಾಲಿನ ತಿರುಗಾಟ, ಕೋಲನ್ನು ತಡೆಯುವ ಸಾಮರ್ಥ್ಯ ಈ ಮೂರು ಅಂಶಗಳು ಸಿಲಂಬಾಟ್ಟಂನ ಮುಖ್ಯವಾದ ಗುರುತುಗಳಾಗಿ ಸಿಲಂಬಾಟ್ಟಂ ಒಂದು ವೀರತ್ವದ ಸಂಕೇತವಾದ ಕಲೆಯಾಗಿದೆ.

**ಪೊಯ್‌ಕ್ಕಾಲ್ ಕುದುರೈ ಆಟ್ಟಂ**

ತಮಿಳುನಾಡಿನ ಹಲವು ಊರು ಕಾಯುವ (ಅಯ್ಯನಾರ್, ಕರುಪ್ಪುಸ್ವಾಮಿ, ಸೋನೈಚ್ಚಾಮಿ) ದೇವರುಗಳು ಕುದುರೆಯನ್ನು ತಮ್ಮ ವಾಹನವನ್ನಾಗಿ ಮಾಡಿಕೊಂಡಿವೆ. ರಾಜರು ಸಹ ಕುದುರೆಯ ದಳವನ್ನು ಹೊಂದಿದ್ದರು, ಆದ್ದರಿಂದ ಎತ್ತಿನ ನಂತರ ಕುದುರೆಗೆ ಮುಖ್ಯ ಸ್ಥಾನ ಕೊಡಲಾಗಿದೆ. ತಮಿಳಿನ ಮಹಾಕಾವ್ಯ ಸಿಲಪ್ಪಾದಿಗಾರಂನಲ್ಲೂ ಮಾದವಿಯು ಆಡಿದ ಹದಿನೆಂಟು ಆಟಗಳಲ್ಲಿ ಪೊಯ್‌ಕ್ಕಾಲ್ ಕುದುರೈ ಆಟವೂ ಒಂದಾಗಿದೆ. ಮರದ ತುಂಡನ್ನು ಒಂದು ಅಡಿಯಿಂದ 11/2 ಅಡಿ ಎತ್ತರದ ಕಟ್ಟಿಗೆ ಮಾಡಿ ಅದರಲ್ಲಿ ಪಾದ ಇಡುವುದಕ್ಕೆ ಅನುಕೂಲವಾಗುವಂತೆ ಜೋಡಿಸಿ, ಕುದುರೆ ಆಕಾರದ ಗೊಂಬೆಯನ್ನು ನಡುವಿನ ಎತ್ತರಕ್ಕೆ ಬರುವ ಹಾಗೆ ತೋಳಿನಲ್ಲಿ ಜೋತು ಬೀಳುವಂತೆ ಮಾಡಿ ಆಡುವ ಆಟವೇ ಪೊಯ್‌ಕ್ಕಾಲ್ ಕುದುರೈ ಆಟ. ಕುದುರೆ ಆಕಾರದ ಗೊಂಬೆಯ ಮೇಲೆ ಹಾಕಿರುವ ಬಟ್ಟೆಯು ಕಾಲನ್ನು ಮರೆಮಾಚಿ ಮರದ ಕಟ್ಟಿಗೆ ಮಾತ್ರ ಕಾಣಿಸುತ್ತದೆ. ಈ ಆಟವು ಮರಾಠರ ಕಾಲದಲ್ಲಿ ತಂಜಾವೂರಿಗೆ ಬಂದದ್ದು ಎಂದು ಚರಿತ್ರೆಕಾರರು ತಿಳಿಸುತ್ತಾರೆ.

**ಪುಲಿಯಾಟ್ಟಂ**

ಹುಲಿಯಂತೆ ವೇಷದರಿಸಿ ಆಡುವ ಆಟವೇ ಪುಲಿಯಾಟ್ಟಂ. ಪುಲಿಯಾಟ್ಟಂ ತಮಿಳುನಾಡಿನ ಒಂದು ಪ್ರಸಿದ್ಧಿ ಕಲೆಯಾಗಿದೆ. ಆಂದ್ರಪ್ರದೇಶ, ಕರ್ನಾಟಕ, ಕೇರಳದಲ್ಲೀ ಈ ಆಟವನ್ನು ಕಾಣಬಹುದು. ದೇಹದ ತುಂಬಾ ಕಪ್ಪು ಮತ್ತು ಹಳದಿ ಬಣ್ಣವನ್ನು ಬಳಿದು ಹುಲಿಯ ಚರ್ಮದಂತೆ ಕಾಣುವ ಹಾಗೆ ಅಲಂಕರಿಸುತ್ತಾರೆ ಹುಲಿಯ ಮುಖವಾಡದ ಜೊತೆಯಲ್ಲಿ ಹುಲಿಯಂತೆ ಹಲ್ಲು, ಕಣ್ಣು, ಮೀಸೆ, ಬಾಲ,

ಕಿವಿ, ಉಗುರುಗಳನ್ನು ಧರಿಸಿಕೊಳ್ಳಲಾಗುತ್ತದೆ. ಆಟದಲ್ಲಿ ಹುಲಿಯ ಹಾಗೆ ಕೋಪಗೊಳ್ಳುವುದು, ಎಗರುವುದು, ಹಾರುವುದು, ಹುದುಗಿಕೊಳ್ಳುವುದು ದೇಹವನ್ನು ಪಾದವನ್ನು ನೆಕ್ಕುವುದು ಮುಂತಾದ ಅಂಶಗಳು ತಾಳಕ್ಕೆ ತಕ್ಕಂತೆ ಆಡಲಾಗುತ್ತದೆ. ಹುಲಿಯ ಕುರಿತಾದ ತಿಳುವಳಿಕೆ ಆಟಗಾರರಿಗೆ ಅಗತ್ಯವಾಗಿರುತ್ತದೆ. ಭಯವನ್ನು ತರಿಸಿದರು ರಂಜಿಸುವ ಆಟವಾಗಿದ್ದು ಮಕ್ಕಳನ್ನು ಹೆಚ್ಚು ಆಕರ್ಷಿಸುತ್ತದೆ. ಆರಂಭದಲ್ಲಿ ಮುಸ್ಲಿಂರಿಂದ ಅದರಲ್ಲೂ ಮೊಹರಂ ಹಬ್ಬದಲ್ಲಿ ಮಾತ್ರ ಆಡುತ್ತಿದ್ದ, ಈ ಕಲೆ ಈಗ ತಮಿಳುನಾಡಿನ ಹಲವು ಜನರಿಂದ (ಜಾತಿ, ಮತ) ಆಡಲ್ಪಡುತ್ತದೆ. ಅದರಲ್ಲೂ ಜಾತ್ರೆಗಳಲ್ಲಿ ತೇರು ಎಳೆಯುವಾಗ ಮಾರಿಯಮ್ಮ ಮತ್ತು ಇತರೆ ದೇವಸ್ಥಾನಗಳಲ್ಲಿ ಈ ಆಟವನ್ನು ಕಾಣಬಹುದು.

**ಗುಮ್ಮಿಯಾಟ್ಟಂ**

ಗುಮ್ಮುದಲ್ ಎಂದರೆ ಕೈ ತಟ್ಟುವುದು, ಕುಳುಮಿ ಎಂದರೆ ಒಗ್ಗೂಡು ಎಂದು ಅರ್ಥ. ಆದ್ದರಿಂದ ಎಲ್ಲರು ಒಗ್ಗೂಡಿ ಕೈ ತಟ್ಟಿ ಆಡುವ ಆಟವೇ ಗುಮ್ಮಿಯಾಟವಾಗಿದೆ. ಇದು ತಮಿಳುನಾಡಿನ ಎಲ್ಲಾ ಭಾಗಗಳಲ್ಲಿ ಕಂಡುಬರುತ್ತದೆ. ತಮಿಳುನಾಡಿನ ಉತ್ತರ ಭಾಗದಲ್ಲಿ ಕಾಲಹರಣಕ್ಕಾಗಿ ಗುಮ್ಮಿ ಆಡುವುದನ್ನು ಕಾಣಬಹುದು. ದಕ್ಷಿಣ ಭಾಗದ ತಮಿಳುನಾಡಿನಲ್ಲಿ ಗುಮ್ಮಿಯು ಸಂಪ್ರದಾಯಿಕ ಶಾಸ್ತ್ರವಾಗಿ ಆಚರಣೆಯಲ್ಲಿ ಕಂಡುಬರುತ್ತದೆ. ಗುಮ್ಮಿ ಆಟವನ್ನು ಒಬ್ಬರೇ ಆಡಲಾಗದು, ಕನಿಷ್ಟ ಪಕ್ಷ ನಾಲ್ಕು ಜನರಾದರೂ ಇರಬೇಕು. ವೃತ್ತಾಕಾರವಾಗಿ ನಿಂತು ಮಹಿಳೆಯರು ಕೈ ತಟ್ಟುತ್ತಾ, ಹಾಡುತ್ತಾ ವೃತ್ತವನ್ನು ಸುತ್ತುತ್ತಾರೆ. ಆಟದ ನಡುವೆ ಹೊರಗೆ ಹೋಗುವುದು ಅಥವಾ ಒಳ ಸೇರುವುದನ್ನು ಕಾಣಬಹುದು. ಜನರು ಹೆಚ್ಚಿದಂತೆ ಅಥವಾ ಕಡಿಮೆಯಾದಂತೆ ವೃತ್ತವು ಬೃಹತ್ತಾಗಿ ಅಥವಾ ಚಿಕ್ಕದಾಗಿಯೂ ಕಂಡುಬರುತ್ತದೆ. ಗುಮ್ಮಿ ಆಟದಲ್ಲಿ ವಯಸ್ಸಿನ ವ್ಯತ್ಯಾಸ ಇರುವುದಿಲ್ಲ, ಹತ್ತರಿಂದ ಅರವತ್ತು ವರ್ಷದ ಮುದುಕಿಯರವರೆಗೂ ಗುಮ್ಮಿ ಆಡುವುದನ್ನು ಕಾಣಬಹುದು. ಮಂಗಳಮುಖಿಯರು ಸಹ ಗುಮ್ಮಿ ಆಡುವುದನ್ನು ಕಾಣಬಹುದು.

**ರಾಜ ರಾಣಿ ಆಟ್ಟಂ**

ರಾಜ ಮತ್ತು ಅವನಿಗೊಬ್ಬ ಗೆಳೆಯ ರಾಣಿ ಅವಳಿಗೊಬ್ಬ ಗೆಳತಿ ಹೀಗೆ ನಾಲ್ಕು ಜನರು ಆಡುವ ಆಟವಾಗಿದೆ. ರಾಜ ಮತ್ತು ರಾಣಿಯ ಮದುವೆ ಮಾಡಿಸುವುದೇ ಈ ಆಟದ ವಸ್ತು. ತಮಿಳುನಾಡಿನ ದಕ್ಷಿಣ ಭಾಗದಲ್ಲಿ ಈ ಆಟವನ್ನು ಹೆಚ್ಚು ಕಾಣಬಹುದು. ಕೆಲವೊಮ್ಮೆ ಈ ಆಟದಲ್ಲಿ ಗಂಡಸರೇ ಸ್ತ್ರೀಯರ ವೇಷಧರಿಸಿ ಆಡುತ್ತಾರೆ. ಇದಕ್ಕಾಗಿ ಗಂಡಸರು ನೀಳವಾದ ಕೇಶರಾಶಿಯನ್ನು ಬೆಳಸಿಕೊಳ್ಳುವುದನ್ನು ಕಾಣಬಹುದು.

**ಕೋಲಾಟ್ಟಂ**

ಎರಡು ಚಿಕ್ಕ ಬಲಿಷ್ಟವಾದ ಕೋಲುಗಳಿಂದ ಒಂದರಿಂದ ಇನ್ನೊಂದಕ್ಕೆ ಹೊಡೆದು ಸದ್ದು ಮಾಡುವ ಆಟವೇ ಕೋಲಾಟ. ಆರಂಭದಲ್ಲಿ ಮದುವೆ ಆಗದ ಗಂಡಸರು ಮಾತ್ರ ಆಡುತ್ತಿದ್ದ ಈ ಆಟ ಕಾಲಾಂತರದಲ್ಲಿ ಹೆಚ್ಚಾಗಿ ಹೆಂಗಸರು ಆಡುವ ಆಟವಾಗಿದೆ. ಕೋಲಾಟದಲ್ಲಿ ಹೆಂಗಸರು ಒಂದು ವೃತ್ತಾಕಾರದಲ್ಲಿ ನಿಂತು ಕೋಲುಗಳನ್ನು ಎದ್ದು, ಕುಳಿತು, ಬಗ್ಗಿ ತಾಳಕ್ಕೆ ತಕ್ಕಂತೆ ಕೈಯಲ್ಲಿರುವ

ಕೋಲುಗಳನ್ನು ಬಡಿದು ಆಡುತ್ತಾರೆ. ಕೃಷ್ಣನನ್ನು ಕುರಿತು ಹಾಡುಗಳನ್ನು ಹಾಡುತ್ತಾ ಆಡುತ್ತಾರೆ. ನಂತರದ ದಿನಗಳಲ್ಲಿ ಸಮೂಹದ ಕುರಿತು, ಪ್ರಮುಖ ನಾಯಕರ ಕುರಿತ ಹಾಡುಗಳನ್ನು ಆಡುವುದು ಕಾಣಬಹುದು. ಈ ಆಟ ಉತ್ತರ ಭಾರತದ ಕಡೆ ಡಾಂಡಿಯಾ ಎಂದು ಕರೆಯಲಾಗುತ್ತದೆ.

**ಕರಡಿ ಆಟ್ಟಂ**

ಕರಡಿಯಂತೆ ವೇಷದರಿಸಿ ಆಡುವ ಆಟವೇ ಕರಡಿ ಆಟ್ಟಂ. ಮರದಿಂದ ಮಾಡಿದ ಕರಡಿಯ ಉದ್ದವಾದ ಬಾಯಿ ತೆಗೆದಿರುವಂತೆ ಮಾಡಲಾಗುತ್ತದೆ. ಅದರೊಂದಿಗೆ ತಲೆಯ ಟೋಪಿ, ಮೇಲಿನ ವಸ್ತ್ರ ಮತು ಕೆಳಗಿನ ವಸ್ತ್ರ ಗೋಣಿ ಚೀಲದಲ್ಲಿ ಹೊಲೆಯಲಾಗುತ್ತದೆ. ಗೋಣಿ ಚೀಲದಲ್ಲಿ ತಲೆ ಕೂದಲಿನಂತೆ ಹಗ್ಗಗಳನ್ನು ಕಟ್ಟಿರುತ್ತಾರೆ. ಬಾಯಿ ಹಲ್ಲು ಕೆಂಪು ಬಣ್ಣದಲ್ಲಿ ಇದ್ದರೆ ತಲೆಯಿಂದ ಪಾದದವರೆಗೆ ಧರಿಸಿರುವ ಬಟ್ಟೆ ಕಪ್ಪು ಬಣ್ಣದಿಂದ ಕೂಡಿರುತ್ತದೆ.

**ಬೂದ ಆಟ್ಟಂ**

ಗರಿಕೆ ಹುಲ್ಲಿನಿಂದ ಬೂತದಂತೆ ಗೊಂಬೆಯನ್ನು ಮಾಡಿ ಎತ್ತಿಕೊಂಡು ಆಡುವ ಆಟವೇ ಬೂದ ಆಟ್ಟಂ. ಜಾತ್ರೆ ಉತ್ಸವ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಈ ಕಲೆಯನ್ನು ಕಾಣಬಹುದು.

**ಪೇಯಾಟ್ಟಂ**

ದೆವ್ವದಂತೆ ನಟಿಸಿ ತೋರಿಸುವುದೇ ಪೇಯಾಟ್ಟಂ. ಒಬ್ಬರು ಸೀರೆಯನ್ನು ಉಟ್ಟು ದೆವ್ವ ಹಿಡಿದ ಹೆಣ್ಣಿನಂತೆ ನಟಿಸುತ್ತಾರೆ. ಇನ್ನೊಬ್ಬರು ಆ ದೆವ್ವದ ತಲೆಯಲ್ಲಿ ಹೊಡೆದು ದೆವ್ವ ಹೇಗೆ ಹಿಡಿಯಿತು ಎಂದು ಕೇಳಿದಾಗ ದೆವ್ವ ತನ್ನ ಕಥೆಯನ್ನು ಹೇಳುವಂತೆ ಕೂಡಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಈ ಕಲೆ ನಡೆಸಿಕೊಂಡು ಬರಲಾಗುತ್ತದೆ.

**ವಿಲ್ಲುಪ್ಪಾಟ್ಟು**

ಬಿಲ್ಲಿನ ಸಹಾಯದಿಂದ ಹಾಡುವ ಆಟವೇ ವಿಲ್ಲುಪ್ಪಾಟ್ಟು. ಇನ್ನಿತರೇ ಸಂಗೀತದ ವಾದ್ಯಗಳಿದ್ದರು ಇಲ್ಲಿ ಬಿಲ್ಲು ಮುಖ್ಯವಾಗಿದೆ. ಆದಿ ಕಾಲದ ಮನುಷ್ಯ ಬೇಟೆಯನ್ನೇ ಮುಖ್ಯ ಕೆಲಸವಾಗಿ ಮಾಡಿಕೊಂಡಿದ್ದ. ಬೇಟೆ ಆಡಿದ ಬೇಡರು ದಣಿವಾರಿಸಿಕೊಳ್ಳಲು ಬಿಲ್ಲಿನಲ್ಲಿದ್ದ ಮಣಿಗಳ ಶಬ್ದದಿಂದ ಹಾಡುತ್ತಾ ಈ ಕಲೆಯನ್ನು ಸೃಷ್ಟಿಸಿರಬಹುದು. ಕೊಲ್ಲುವ ಅಸ್ತ್ರವಾದ ಬಿಲ್ಲು ಮುಂದೆ ಕಲೆಯ ಅಸ್ತ್ರವಾಗಿ ಬದಲಾಗಿದೆ. ದೇವರನ್ನು ಸ್ಮರಿಸುವುದು, ಕತೆಯ ಪರಿಚಯ, ಗುರು ನಮಸ್ಕಾರ, ಕಥೆ ಹೇಳುವುದು, ವಂದನೆ ಹೀಗೆ ಏಳು ರೀತಿಯ ಅಂಶಗಳನ್ನು ಹೊಂದಿರುವ ವಿಲ್ಲುಪ್ಪಾಟ್ಟು ಹೆಚ್ಚಾಗಿ ಸಮುದಾಯದ ಸೌಹಾರ್ದತೆಗಾಗಿ ನೀತಿ ಕತೆಗಳನ್ನು ಹೇಳುವುದು ಈ ಕಲೆಯ ಉದ್ದೇಶವಾಗಿದೆ.

**ದೇವರಾಟ್ಟಂ**

ದೇವರ ಸಭೆಯಲ್ಲಿ ದೇವರು ಆಡಿದ ಆಟವೇ ದೇವರಾಟ್ಟಂ ಎಂದು ಹೇಳಲಾಗುತ್ತದೆ. ಇದು ಪುರುಷರಿಂದ ಮಾತ್ರ ಆಡುವ ಆಟವಾಗಿದೆ. ಗಂಡಸರು ಕೈಯಲ್ಲಿ ಚಿಕ್ಕ ಬಟ್ಟೆಯೊಡನೆ ಕಾಲಿನಲ್ಲಿ ಗೆಜ್ಜೆ ಕಟ್ಟಿಕೊಂಡು ಸೊಂಟದಲ್ಲಿ ಲುಂಗಿ ಕಟ್ಟಿಕೊಂಡು ಆಡುತ್ತಾರೆ. ಇದನ್ನು ತಮಿಳುನಾಡಿನ ದಕ್ಷಿಣ ಜಿಲ್ಲೆಗಳಲ್ಲಿ ಜೀವಿಸುವ ಕಂಬಲದ ನಾಯಕರು ಮಾತ್ರ ಆಡುತ್ತಾರೆ.

**ಸಕ್ಕೈಯಾಟ್ಟಂ**

ನಾಲ್ಕು ತೇಗ ಮರದ ತುಂಡುಗಳನ್ನು ಬೆರಳುಗಳ ಮಧ್ಯದಲ್ಲಿಟ್ಟು ಶಬ್ದ ಮಾಡುವ ಆಟವೇ ಸಕ್ಕೈಯಾಟ್ಟಂ. ಸಕ್ಕೈ ಎಂದರೆ ಮರದ ತುಂಡು ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಎಂಟು ಅಥವಾ ಹನ್ನೆರಡು ಜನರು ಒಂದೇ ರೀತಿಯಾದ ವಸ್ತ್ರಗಳನ್ನು ದರಿಸಿಕೊಂಡು ಮಾರಿಯಮ್ಮ, ಮುರುಗನ್ ದೇವಸ್ಥಾನಗಳಲ್ಲಿ ಮತ್ತು ಜಾತ್ರಾ ದಿನಗಳಲ್ಲಿ ಆಡುತ್ತಾರೆ. ಚಾರಿತ್ರಿಕ ವೀರರ ಕಥೆಗಳು, ನೀತಿ ಕಥೆಗಳು ಮುಂತಾದ ಕಥೆಗಳನ್ನು ಹೇಳಲಾಗುತ್ತದೆ.

**ಬೊಮ್ಮಲಾಟ್ಟಂ**

ಚರ್ಮ, ಮರ ಅಥವಾ ಮಣ್ಣಿನಲ್ಲಿ ಮಾಡಿದ ಗೊಂಬೆಗಳನ್ನು ಈ ಕಲೆಯಲ್ಲಿ ಬಳಸಲಾಗುತ್ತದೆ. ಗೊಂಬೆಗಳನ್ನು ಇಟ್ಟು ಕಥೆ ಹೇಳುವುದರಿಂದ ಇದು ಗೊಂಬೆಯಾಟವಾಗಿದೆ. ನುಗ್ಗೆ, ಕಟ್ಟಿಗೆಯನ್ನು ಬಳಸಿ 1.5 ಅಡಿಯಂದ 3 ಅಡಿಯ ವರೆಗೆ ಎತ್ತರವಿದ್ದು ಮೂರರಿಂದ 10 ಕೆ.ಜಿ ಯವರೆಗೆ ತೂಕ ಹೊಂದಿರುತ್ತದೆ. ಸಣ್ಣ ಹಗ್ಗ ಕಟ್ಟಿ ಕಾಣದಂತೆ ಮರೆಯಲ್ಲಿದ್ದು ಅತ್ಯಂತ ಸಾಮರ್ಥ್ಯದಿಂದ ಆ ಗೊಂಬೆಗಳನ್ನು ಆಡಿಸುತ್ತಾರೆ. ಹೆಚ್ಚಾಗಿ ಪುರಾಣ ಮತ್ತು ಚಾರಿತ್ರಿಕ ಕಥೆಗಳನ್ನು ಬಿತ್ತರಿಸಲಾಗುತ್ತದೆ. ಈ ಆಟ ದೊಡ್ಡವರಿಂದ ಮಕ್ಕಳವರೆಗೂ ರಂಜಿಸುವ ಕಲೆಯಾಗಿದೆ.

**ಮಯಿಲಾಟ್ಟಂ**

ನವಿಲಿನಂತೆ ರೂಪದರಿಸಿ ರೆಕ್ಕೆಗಳನ್ನು ಬಿತ್ತರಿಕೊಂಡು ತಾಳಕ್ಕೆ ತಕ್ಕಂತೆ ಆಡುವುದೇ ಮಯಿಲಾಟ್ಟಂ. ಗರಗಾಟ್ಟಂ ಆಟದ ಜೊತೆಯಾಟವಾಗಿಯೂ, ಗರಗಾಟ್ಟಂ ನಡುವೆ ಈ ಆಟವನ್ನು ಆಡಲಾಗುತ್ತದೆ. ಮಯಿಲಾಟ್ಟಂ ಆಡುವ ಕಲೆಗಾರರು ನವಿಲಿನಂತೆ ರೂಪಧರಿಸಿಕೊಳ್ಳುವಾಗ ದೊಡ್ಡ ಕೊಕ್ಕರೆಯಾಕಾರವನ್ನು ಕುತ್ತಿಗೆಗೆ ಧರಿಸಿಕೊಳ್ಳುತ್ತಾರೆ.

**ಕಣಿಯಾನ್ ಕೂತ್ತು**

ಇದು ಕಣಿಯಾನ್ ಜಾತಿಯವರಿಂದ ನಡೆಯಲಾಗುವ ಕಲೆಯಾಗಿದ್ದರಿಂದ ಇದನ್ನು ಕಣಿಯಾನ್ ಕೂತ್ತು ಎಂದು ಕರೆಯಲಾಗಿದೆ. ಸುಡಲೈಮಾಡನ್, ಅಮ್ಮನ್(ದೇವಿ), ಮುಂತಾದ ದೇವಸ್ಥಾನದ ಜಾತ್ರೆಗಳಲ್ಲಿ ಮಾತ್ರ ನಡೆಯುವ ಗ್ರಾಮೀಣ ಕಲೆಯಾಗಿದೆ. ಕೇವಲ ಗಂಡಸರು ಮಾತ್ರ ಆಡುವ ಈ ಕಲೆ ಸುಮಾರು 16ನೆ ಶನಮಾನದಿಂದಲೇ ಪ್ರಚಲಿತದಲ್ಲಿದ್ದರಬಹುದೆಂದು ಸಂಶೋಧಕರು ಅಭಿಪ್ರಾಯ ಪಡುತ್ತಾರೆ. ವಿರಾಮ ಇಲ್ಲದೆ ರಾತ್ರಿ ಹೊತ್ತು ದೇವರ ಮುಂದೆ ಮಾತ್ರ ಆಡುಲಾಗುತ್ತದೆ. ಚಿಕ್ಕದೈವದ ಆಚರಣೆ, ಚಿಕ್ಕದೇವರುಗಳ ಕತೆಯನ್ನು ಹೇಳುವ ಮೂಲ ಉದ್ದೇಶವನ್ನಿರಿಸಿಕೊಂಡಿವೆ. ಸುಡಲೈಮಾಡನ್ ದೇವಸ್ಥಾನದಲ್ಲಿ ಶುಕ್ರವಾರದಂದು, ಅಮ್ಮನ್ ದೇವಸ್ಥಾನಗಳಲ್ಲಿ ಮಂಗಳವಾರದಂದು ಈ ಕಲೆ ನಡೆಯುತ್ತದೆ. ರಾತ್ರಿ ಒಂಬತ್ತು ಘಂಟೆಗೆ ಆರಂಭವಾಗುವ ಕೂತ್ತು ನಡು ರಾತ್ರಿ ಪೂಜಾರಿಯ ಮೈಮೇಲೆ ದೇವರು ಬಂದು ಕಣಿಯಾನ್‌ನನ್ನು ಕರೆದು ಹೇಳುವ ಮಾತುಗಳು ಈಗಲೂ ನಂಬಲಾಗುತ್ತದೆ. ಪೂಜಾರಿ

ತನಗರಿವಿಲ್ಲದಂತೆ ಆಡುವುದನ್ನು ಸಾಮಿಯಾಡಿ ಎಂದು ಕರೆಯಲಾಗುತ್ತದೆ. ದೇವರಿಗೆ ಸಂಬಂದಪ್ಪಟ್ಟ ಕಲೆಯಾಗಿದ್ದರಿಂದ ಸಮಯದ ಕುರಿತ ಚಿಂತನೆ ಇರುವುದಿಲ್ಲ.

**ಕುರವನ್ ಕುರತ್ತಿ ಆಟ್ಟಂ**

ಕುರವರ್ ಸಮುದಾಯವನ್ನು ಸೇರಿದ ಗಂಡು ಮತ್ತು ಕುರವರ್ ಸಮುದಾಯವನ್ನು ಸೇರಿದ ಹೆಣ್ಣಿನ ವೇಷ ಧರಿಸಿ ಆಡುವ ಆಟವೇ ಕುರವನ್ ಕುರತ್ತಿ ಆಟ್ಟಂ. ಉಡುಂಬು ಚರ್ಮದಿಂದ ಮಾಡಿದ ಡಬ್ಬಿ ಅಥವಾ ಡಾಲ್ಡ ಡಬ್ಬಿ ಹೆಗಲಿಗೆ ನೇತು ಹಾಕಿಕೊಂಡು ಅದನ್ನು ತಟ್ಟುತ್ತಾ ಆಡುತ್ತಾರೆ. ಅನೇಕ ರೀತಿಯ ಹಾಡುಗಳನ್ನು ಹೆಚ್ಚು ಸಮಯ ಹಾಡುತ್ತಾ ಕುಣಿಯುತ್ತಾ ಹಲವು ಸಂದರ್ಭಗಳನ್ನು ತೋರಿಸುವ ಕಲೆಯಾಗಿದೆ. ಈ ಆಟದಲ್ಲಿ ಆಡುವವರು ಕೈ ಕಾಲುಗಳನ್ನು ಎತ್ತಿ ಕುಣಿಯುವ ರೀತಿ ಪುರುಷ ಕಲೆಗಾರರಿಗೆ ಸಮಾನವಾಗಿ ಮಹಿಳಾ ಕಲಾವಿದರು ಕುಣಿಯುವ ರೀತಿಯನ್ನು ಕಾಣಬಹುದು.

**ತೆರುಕೂತ್ತು**

ಕೂತ್ತು ಎಂದರೆ ನಟನೆ, ಆಟ, ಕುಣಿತ ಎಂದು ಅರ್ಥ. ತಮಿಳಿನ ಮಹಾಕಾವ್ಯವಾದ ಸಿಲಪ್ಪಾದಿಗಾರಂನಲ್ಲಿ ಮಾಧವಿಯು ಹದಿನೆಂಟು ಬಗೆಯ ಕೂತ್ತುಗಳನ್ನು ಆಡಿದ್ದಳು ಎಂಬುದನ್ನು ತಿಳಿಯಬಹುದು. ಇದು ಜನಪದರಲ್ಲಿ ಕುಣಿತದ ಜೊತೆ ನಟನೆಯಾಗಿಯೂ ಕಂಡುಬರುತ್ತದೆ. ತೆರು ಎಂದರೆ ಬೀದಿ ಎಂದರ್ಥ. ಬೀದಿಯಲ್ಲಿ ಕೂತ್ತು ಆಡಿದ್ದರಿಂದ ತೆರುಕೂತ್ತು ಎಂದು ಕರೆಯಲಾಯಿತು. ಆಧುನಿಕ ನಾಟಕ ಕಲೆಗೆ ತೆರುಕೂತ್ತು ಒಂದು ಪ್ರಮುಖ ಬುನಾದಿಯಾಗಿರುವುದನ್ನು ಕಾಣಬಹುದು. ತೆರುಕೂತ್ತು ಬೀದಿ ನಾಟಕವನ್ನು ಹೋಲುತ್ತದೆ. ರಾತ್ರಿ ಹತ್ತು, ಹನ್ನೊಂದು ಘಂಟೆಗೆ ಆರಂಭವಾಗಿ ಬೆಳಗಿನ ಜಾವ ನಾಲ್ಕು, ಐದು ಘಂಟೆಗೆ ಮುಕ್ತಾಯವಾಗುತ್ತಿತ್ತು. ಆದರೆ ಈಗ ತೆರುಕೂತ್ತಿನ ಸಮಯದಲ್ಲಿ ವ್ಯತ್ಯಾಸ ಕಾಣಬಹುದು. ಆಗಿನ ಸಂದರ್ಭದಲ್ಲಿ ಮಹಾಭಾರತದ ಕತೆಗಳು, ರಾಮಾಯಣದ ಕತೆಗಳು, ಅಲ್ಲಿ ಅರ್ಜುನ, ಹರಿಶ್ಚಂದ್ರ ಕತೆಗಳನ್ನು ತೆರುಕೂತ್ತುವಿನ ಮುಖ್ಯ ವಸ್ತುಗಳಾಗಿದ್ದವು. ಆದರೆ ಪ್ರಸ್ತುತ ಸಂದರ್ಭದಲ್ಲಿ ರೇಣುಕಾ ಚರಿತ್ರೆ, ಬಬ್ರುವಾಹನ ಕಾಳಗ, ವರಾಹ ಅವತಾರ, ಶ್ರೀನಿವಾಸ ಕಲ್ಯಾಣ ಮುಂತಾದ ಕತೆಗಳ ಜೊತೆಯಲ್ಲಿ ಹೆಚ್ಚಾಗಿ ಜಾಗೃತಿ, ಜಾತಿ ವಿನಾಶ, ಸಾಮಾಜಿಕ ಸೌಹಾರ್ಧತೆ, ಆರೋಗ್ಯ ಮುಂತಾದ ಸಾಮಾಜಿಕ ವಿಷಯಗಳ ಕುರಿತು ತೆರುಕೂತ್ತು ನಡೆಯುವುದನ್ನು ಕಾಣಬಹುದು.

**ಉಪಸಂಹಾರ**

ಒಟ್ಟರೆಯಾಗಿ ಜಾನಪದ ಕಲೆಗಳು ಒಂದು ಸಮುದಾಯದ ಸಂಸ್ಕೃತಿಯ ಸಂಗತಿಯನ್ನು ತಿಳಿಸುತ್ತದೆ. ಜನಪದರು ದೇವರ ಮೇಲೆ ಇಟ್ಟಿರುವ ನಂಬಿಕೆ ಆಚಾರಣೆಯ ಭಾಗವಾಗಿ ಕಲೆಗಳು ಬೆಳವಣಿಗೆಯಾಗಿವೆ. ಸುಖ, ದುಃಖ, ಏಳು, ಬೀಳು, ಆಸೆ, ಕೋಪ, ನಾಚಿಕೆ, ವೇದನೆ, ವಿರಕ್ತಿ, ಸಂತೋಷ, ಆಶ್ಚರ್ಯ ಮುಂತಾದ ಭಾವನೆಗಳನ್ನು ಚಿಂತಿಸುತ್ತಾ ಅನುಭವಿಸಿದಷ್ಟು ಆನಂದ ನೀಡುವ ಕಲೆಗಳೇ ಜಾನಪದ ಕಲೆಗಳು. ಇದು ಕೇವಲ ಕಾಲಹರಣಕ್ಕಾಗಿ ಮಾತ್ರವಲ್ಲದೆ ಮುಂದಿನ ಪೀಳಿಗೆಗೆ ವೈಚಾರಿತೆ, ಸಾಂಸ್ಕೃತಿಕ ವಿಚಾರವನ್ನು ತಲುಪಿಸುತ್ತದೆ. ಇದನ್ನು ಉಳಿಸಿಕೊಂಡು ಬರುವುದು ಆಯಾ ಸಮುದಾಯದ

ಕರ್ತವ್ಯವಾಗಿದೆ. ಪ್ರಸ್ತುತ ಬರವಣಿಗೆಯಲ್ಲಿ ತಮಿಳುನಾಡಿನ ಜಾನಪದ ಕಲೆಗಳ ಕುರಿತು ಪರಿಚಯ ಮಾಡಿಕೊಡಲಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಗತ್ತ್ಯಲಿಂಗಂ.ಸ ಮತ್ತು ರಾಮನಾಥನ್.ಅ (ಸಂ). (1987). ನಾಟ್ಟುಪ್ಪುರವಿಯಲ್, ಇಂದಿಯ ತಮಿಳ್ ನಾಟ್ಟುಪ್ಪುರವಿಯಲ್ ಪ್ರಕಾಶನ, ತಮಿಳುನಾಡು.
- ಪೆರುಮಾಳ್ ಎ.ಎನ್. (1980). ತಮಿಳಗ ನಾಟ್ಟುಪ್ಪುರ ಕಲೈಗಳ್, ಉಲಗತ್ ತಮಿಳ್ ಆರಾಯ್ಚಿ ನಿರುವನಂ, ಚೆನ್ನೈ.
- ಪೆರಿಯಸಾಮಿ ಓಂ. (1981). ನಾಟ್ಟುಪ್ಪುರಕ್ ಕಲೈಗಳ್. ಫೆಸ್ಟಿವಲ್ ಆಫ್ ಫೋಕ್ ಅಂಡ್ ಟ್ರೈಬಲ್ ಆರ್ಟ್ಸ್ ಆಫ್ ತಮಿಳುನಾಡು, ಗಾಂಧಿಗ್ರಾಮ ರೂರಲ್ ಇನ್ಸ್ಟಿಟ್ಯೂಟ್, ತಮಿಳುನಾಡು.
- ರಾಸಮಾಣಿಕ್ಕನಾರ್.ಎಂ. (1927). ತಮಿಳಗಗ್ ಕಲೈಗಳ್, ಪಾರಿ ನಿಲೈಯಂ ಚೆನ್ನೈ.
- ಸವೇರಿ.ಎನ್.ಎಮ್. (ಸಂ). (1993). ಕಲೈಮುಗಂ, ವಾರ್ಷಿಕ ಕಲಾ ಪತ್ರಿಕೆ, ತಿರುಮರೈ ಕಲಾಮಂಡ್ರಂ.
- ಶಕ್ತಿವೇಲ್.ಎಸ್. (1996). ನಾಟ್ಟುಪ್ಪುರವಿಯಲ್ ಓರ್ ಅರಿಮುಗಂ, ತಮಿಳ್ ವಿಶ್ವವಿದ್ಯಾಲಯ, ತಂಜಾವೂರ್.


IIMRD JOURNALS